ಕರ್ನಾಟಕ ಸರ್ಕಾರ
ಮೀನುಗಾರಿಕೆ ನಿರ್ದೇಶನಾಲಯ
3ನೇ ಮಹಡಿ, ಪೋಡಿಯಂ ಬ್ಲಾಕ್, ವಿಶ್ವೇಶ್ವರಯ್ಯ ಕೇಂದ್ರ, ಡಾ|| ಬಿ. ಆರ್. ಅಂಬೇಡ್ಕರ್ ವೀಧಿ, ಬೆಂಗಳೂರು – 560 001
ದೂ : 080 - 2286 4681/4604 ಫ್ಯಾಕ್ಸ್ : 080 - 2286 4619 ಇಮೇಲ್ : dof-blr-ka@nic.in

**ಸಂಖ್ಯೆ: DOF-TECHOALL1/340/2022,E-891987,** **ದಿನಾಂಕ:08/11/2022**

# ಸುತ್ತೋಲೆ

**ವಿಷಯ**: ಇ-ಟೆಂಡರ್ ಪ್ರಕ್ರಿಯೆಯ ಏಕ ಮಾತ್ರ ಟೆಂಡರ್ ಸ್ವೀಕೃತವಾದ ಪ್ರಕರಣಗಳನ್ನು ಪರಿಗಣಿಸುವ ಬಗ್ಗೆ ಸೂಕ್ತ ಮಾರ್ಗದರ್ಶನ ನೀಡುವಂತೆ ಕೋರಿ.

**ಉಲ್ಲೇಖ**: ಕೇಂದ್ರ ಕಛೇರಿಯ ಸುತ್ತೋಲೆ ಸಂಖ್ಯೆ: **DOF-TECHOAL2/ 92/2022, ಇ-791427. ದಿನಾಂಕ:14/10/2022.**

************

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ ಪತ್ರದಲ್ಲಿ ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕು ವಿಲೇವಾರಿ ಸಂಬಂಧ ಇ-ಟೆಂಡರ್ ಪ್ರಕ್ರಿಯೆ ಚಾಲ್ತಿಯಲ್ಲಿದ್ದು, ಈಗಾಗಲೇ ಉಲ್ಲೇಖ(3)ರ ಸುತ್ತೋಲೆಯಲ್ಲಿ ಇ-ಟೆಂಡರ್ ಪ್ರಕಟಣೆ ಹೊರಡಿಸಿರುವ ಜಲಸಂಪನ್ಮೂಲಗಳಿಗೆ ನಿಗದಿಪಡಿಸಿರುವ ECV (Estimated Cost Value) ಅಂದರೆ ಸರ್ಕಾರಿ ಸವಾಲನ್ನು ಆಧರಿಸಿ ಉಲ್ಲೇಖ(2) ರ ಕಂಡಿಕೆ 10 ರಂತೆ ಆರ್ಥಿಕ ಬಿಡ್ ಅಂಗೀಕರಿಸುವಂತೆ ಹಾಗೂ ತದನಂತರ ನಿಯಮಾನುಸಾರ ದೃಢೀಕರಣ ಪ್ರಸ್ತಾವನೆಗಳನ್ನು ಸಲ್ಲಿಸುವಂತೆ ಸೂಚಿಸಲಾಗಿತ್ತು.

ಅದರಂತೆ, ಮೀನು ಪಾಶುವಾರು ಹಕ್ಕನ್ನು ಇ-ಟೆಂಡರ್ ಮೂಲಕ ಅತೀ ಹೆಚ್ಚು ಬಿಡ್ ಮಾಡಿರುವ ಬಿಡ್‌ದಾರರಿಗೆ ವಿಲೇವಾರಿ ಮಾಡಿ ಆದೇಶ ನೀಡಲಾಗುತ್ತಿದೆ. ಇ-ಟೆಂಡರ್ ಮೂಲಕ ಅತೀ ಹೆಚ್ಚು ಬಿಡ್ ಮಾಡಿ ಕೆರೆಗಳನ್ನು ಪಡೆದಿರುವ ಬಿಡ್ ದಾರರಿಗೆ ಹಲವು ಗ್ರಾಮಗಳಲ್ಲಿ ಮೀನುಗಾರಿಕೆ ಚಟುವಟಿಕೆ ನಡೆಸಲು ಅಡ್ಡಿ ಪಡಿಸುತ್ತಿದ್ದು, ಈ ಸಂಬಂಧ ಯಶಸ್ವಿ ಬಿಡ್‌ರಾರರು ಸುಗಮವಾಗಿ ಮೀನುಗಾರಿಕೆ ಚಟುವಟಿಕೆ ಕೈಗೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವಂತೆ ತಿಳಿಸಿದೆ.

ಸಹಿ/-
ಮೀನುಗಾರಿಕೆ ನಿರ್ದೇಶಕರು

ಗೆ,
ಎಲ್ಲಾ ಮೀನುಗಾರಿಕೆ ಜಂಟಿ ನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಉಪನಿರ್ದೇಶಕರು
ಪ್ರತಿ: ಎಲ್ಲಾ ಮೀನುಗಾರಿಕೆ ಸಹಾಯಕ ನಿರ್ದೇಶಕರು
ಪ್ರತಿ: ಹಗುಪ ಸಂಗ್ರಾಹ ಕಡತ (1) ಮತ್ತು (2)ಕ್ಕೆ ಮಾಹಿತಿಗಾಗಿ.

ಮೀನುಗಾರಿಕೆ ನಿರ್ದೇಶಕರ ಪರವಾಗಿ